ರಾತ್ರಿ ಅದೇ ರೋಮಾಂಚನವೊಂದು ಹಿತವಾದ ಆಶ್ಚರ್ಯದೊಂದಿಗೆ ತನ್ನನ್ನು ಎದುರುಗೊಳ್ಳುತಿತ್ತು. ತಾನು ಪರವಶನಾಗಿ ಮತ್ತೆ, ಮತ್ತೆ, ಮತ್ತೆ, ಮತ್ತೆ ಅವಳನ್ನು ಚುಂಬಿಸುತ್ತಾ ಹಲಸಿನ ಮೇಣದಂತೆ ಅವಳಿಗೆ ಅಂಟಿಕೊಳ್ಳುತ್ತಿದ್ದೆನೆಂದು ನೆನಪು. ಸಕ್ಕರೆ ಅಚ್ಚೊಂದು ಬಾಯಲ್ಲಿ ಕರಗಿ ಉಳಿಸಿ ಹೋದಂತಹ ನೆನಪದು.

ಬೆಳಗಾಗಿ ಎದ್ದರೆ ತನಗೂ ಆಫೀಸ್ ಇರುತ್ತಿತ್ತು, ಅವಳಿಗೂ. ಎಲ್ಲಿ ಹತ್ತುತ್ತಿದ್ದಳೋ, ಎಲ್ಲಿ ಇಳಿಯುತ್ತಿದ್ದಳೋ ಗೊತ್ತಿಲ್ಲ. ಎಲ್ಲಿ ಸಿಗುತ್ತಿದ್ದಳೋ, ಎಲ್ಲಿ ಕಳೆದು ಹೋಗುತ್ತಿದ್ದಳೋ ನೆನಪಿಲ್ಲ. ಆದರೆ ಇಲ್ಲವೆನ್ನಿಸಿರಲಿಲ್ಲ. ಮನಸ್ಸನ್ನಾವರಿಸಿಕೊಂಡು, ಹೃದಯದ ಗೂಡಿನಲ್ಲಿ ಕನಸಾಗಿ ಬಚ್ಚಿಟ್ಟುಕೊಂಡಿದ್ದಳು. ರಾತ್ರಿಯಾಗುತ್ತಿದ್ದಂತೇ ಉಕ್ಕಿ ಬರುವ ನೆನಪಿನ ಮಧುರ ಯಾತನೆಯಲ್ಲಿ ಒಂದಷ್ಟು ನಿಡುಸುರುಗಳನ್ನು ಚೆಲ್ಲುತ್ತಾ ಅವಳನ್ನೆತ್ತಿ ತನ್ನದೆಯ ಮೇಲೆ ಕೂರಿಸಿಕೊಂಡು ಕನಸಿನಲ್ಲೆಂಬಂತೆ ಮೃದುವಾಗಿ ಸವರುತ್ತಾ ಬೆಳಗು ಮಾಡುತ್ತಿದ್ದೆನೆಂದು ನೆನಪು.

ಆದರೆ ಹೇಳಲಿಲ್ಲ. ಅವಳೇ ಊಹಿಸಿದಳು. ಒಂದು ದಿನ ಸೂಟ್‌ಕೇಸ್ ಹೊತ್ತು ಮನೆಗೆ ಬಂದಳು. ಬಾಗಿಲು ತೆರೆದು ನಿಲ್ಲುತ್ತಿದ್ದಂತೇ ತನ್ನ ತೆರೆದ ಹೃದಯಕ್ಕೆ ಹಾರಿದಳು. ತಾನು ಕ್ಷಣ ಮಾತ್ರದಲ್ಲಿ ಕವಾಟದ ಸುತ್ತಲೂ ಅಸಂಖ್ಯ ಮೊಳೆ ಜಡಿದು ಆ ಪುಟಾಣಿ ಹೃದಯವನ್ನು ಶಾಶ್ವತವಾಗಿ ಭದ್ರ ಪಡಿಸಿಕೊಂಡೆ. ಅಥವಾ ಹಾಗಂತ ಭಾವಿಸಿದೆ. ಉಸಿರುಗಟ್ಟುವಂತಹ ಸುದೀರ್ಘ ಅಪ್ಪುಗೆಯಲ್ಲಿ ಮೊದಲ ಬಾರಿಗೆ ಅವಳ ಕಣ್ಣೀರನ್ನು ಹೀರಿದೆ. ಸಂತೋಷಕ್ಕೋ, ದುಃಖಕ್ಕೋ ಒಂದೇ ಸಮನೆ ಹರಿದ ಕಂಬನಿಯ ಕೊಳದಲ್ಲಿ ಇಬ್ಬರೂ ಮಿಂದು ಮಿಂದು ಎದ್ದೆವು. ಅದು ಉಪ್ಪಾಗಿತ್ತೋ ನೆನಪಿಲ್ಲ. ಅಂದು ಹೊಟ್ಟೆಯೊಳಗಿನ ಎಲ್ಲಾ ಚಿಟ್ಟೆ ತರಹೇವಾರಿ ಬಣ್ಣ ತಳೆದು ವರ್ತುಲಾಕಾರದಲ್ಲಿ ನಮ್ಮಿಬ್ಬರ ನಡುವೆ ಸುತ್ತಿ, ಮನೆಯ ಗೋಡೆಗಳನ್ನು ಅಲಂಕರಿಸಿಕೊಂಡಿತು. ತಾನು ಬಣ್ಣ ಬಣ್ಣದ ಆ ಗೋಡೆಗಳನ್ನು ನೋಡುತ್ತಾ ಕನಸಿನಲ್ಲೆಂಬಂತೆ ಉನ್ಮತ್ತನಾಗಿ ಮತ್ತೆ ಮತ್ತೆ ಅವಳನ್ನು ಚುಂಬಿಸುತ್ತಾ ಜೇನಿನಂತೆ ಆವರಿಸಿಕೊಂಡೆನೆಂದು ನೆನಪು.

ಹೇಗೆ ಬದುಕಬೇಕೋ ಗೊತ್ತಿರಲಿಲ್ಲ. ಅವಳು ಸೊಪ್ಪು ತಂದರೆ ತಾನು ಚಾಕು ಹಿಡಿದು ಕಸರತ್ತು ಮಾಡುತ್ತಾ ಕತ್ತರಿಸುತ್ತಿದ್ದೆ. ಒಮ್ಮೆ ಚಿಕನ್ ಕತ್ತರಿಸಲು ಹೋಗಿ, ಕೈ ಕತ್ತರಿಸಿಕೊಂಡಳು. ತಾನು ಓಡಿ ಹೋಗಿ ಅಮಾನತ್ತು ಅವಳನ್ನೆತ್ತಿ ತೊಡೆ ಮೇಲೆ ಕೂರಿಸಿಕೊಂಡು, ರಕ್ತ ಒಸರುವ ಅವಳ ಬೆರಳನ್ನೆತ್ತಿ ಬಾಯಲ್ಲಿಟ್ಟುಕೊಂಡೆ. ಅದಾಗ ಪಡುವಣದಲ್ಲಿ ಮುಳುಗಲು ಹೊರಟ ಸೂರ್ಯ ಸ್ವಲ್ಪ ಜಾಸ್ತಿ ಹೊಂಗಿರಣವನ್ನು ಅಂಗಳದಲ್ಲಿ ಚಲ್ಲಿ ನಿಂತಿದ್ದ. ಬಂಗಾರದ ಬಣ್ಣದಲ್ಲಿ ಆರ್ದ್ರವಾಗಿ ತನ್ನತ್ತ ನೋಡುತ್ತಿದ್ದ ಆ ಕಣ್ಣೊಳಗೆ ತಾನು ನಿಧಾನವಾಗಿ ಇಳಿದಿದ್ದು ನೆನಪಿದೆ.

ಹೊರಗೆ ಬಸ್ಸು ಚಲಿಸುತ್ತಿತ್ತು, ಆಫೀಸ್ ಯಥಾಪ್ರಕಾರ ಸಾಗುತ್ತಿತ್ತು. ಒಮ್ಮೆ ಮಳೆ, ಒಮ್ಮೆ ಚಳಿ, ಒಮ್ಮೆ ಬಿಸಿಲು. ದಿನಗಳು ಹಾರುತ್ತಿದ್ದವು. ತಾನು ಅದನ್ನು ಹಿಡಿಯಲು ಹೋಗುತ್ತಿರಲಿಲ್ಲ. ಕತ್ತಲು ಒಂದಷ್ಟು ಕಪ್ಪು ತಂದು ಅಂಗಳಕ್ಕೆ ಸುರಿಯುತ್ತಿತ್ತು, ಹಗಲು ಅದನ್ನು ಜಾಡಿಸಿ ಒದ್ದು, ಒಂದಷ್ಟು ಬೆಳಕು ಚಲ್ಲಿ ಹೋಗುತ್ತಿತ್ತು, ತಾನು ಅದನ್ನೂ ಮೊಗೆಯಲಿಲ್ಲ. ರಸ್ತೆಯಲ್ಲಿ ಮರಗಳು ಉರುಳುತ್ತಿದ್ದವು, ಹಾಗೇ ಮತ್ತೆಲ್ಲೋ ಚಿಗುರುತ್ತಿದ್ದವು, ತಾನು ಲೆಕ್ಕವಿಡಲಿಲ್ಲ. ನಿರಂಬಳ ಆಕಾಶದಲ್ಲಿ ತಿಳಿ ನೀಲಿ ಮೋಡ, ರಸ್ತೆಯಂಚಿನ ಗ್ರಿಲ್‌ನಲ್ಲಿ ತೊಟ್ಟಿಕ್ಕಿದ ಮಳೆ ಹನಿ, ಅರಳಿದ ಹೂವು, ಹಾರಿದ ಯಾವುದೋ ಹಕ್ಕಿ, ಜೀಬ್ರಾ ಕ್ರಾಸ್‌ನಲ್ಲಿ ಮಕ್ಕಳ ಕಲರವ. ಹಾರುವ ವಿಮಾನದಲ್ಲಿ ಕುಳಿತು ಸಾಗುತ್ತಿದ್ದೆ.

ಮಧ್ಯೆ ಇಬ್ಬರ ಆಫೀಸೂ ಬದಲಾಯಿತು. ಬಸ್, ಕ್ಯಾಬ್, ಕ್ಯಾಬಿನ್, ಲಿಫ್ಟ್ ಎಲ್ಲವೂ. ಹಗಲು